ರಾಜ್ಯದಲ್ಲಿ ಶಿಶುವಿಹಾರಗಳು

೭೪೫. ಶ್ರೀ ಐ. ಬಿ. ಶಂಕರ್ (ಚಿಕ್ಕಮಗಳೂರು).—ಮಾನ್ಯ ಪ್ರಾಥಮಿಕ ಹಾಗೂ ವಯಸ್ಕರ ಶಿಕ್ಷಣ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

೧) ರಾಜ್ಯದಲ್ಲಿ ಸರ್ಕಾರದಿಂದ ಹಾಗೂ ಖಾಸಗಿಯವರಿಂದ ನಡೆಸಲ್ಪಡುತ್ತಿರುವ ಶಿಶುವಿಹಾರಗಳ ಸಂಖ್ಯೆ ಎಷ್ಟು ?

೨) ಸದರಿ ಶಿಶುವಿಹಾರಗಳಲ್ಲಿ ಉಪಾಧ್ಯಾಯರುಗಳು ಸರ್ಕಾರದಿಂದ ದೊರೆಯುತ್ತಿರುವ ಸೌಲಭ್ಯದಲ್ಲಿ ಸಂಬಳ ಹಾಗೂ ಭತ್ಯೆ ತಾರತಮ್ಯವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

೩) ಹಾಗಿದ್ದಲ್ಲಿ ಇದನ್ನು ಸರಿಪಡಿಸಲು ಸರ್ಕಾರದವರು ಕ್ರಮ ಕೈಗೊಳ್ಳುವರೇ ?

ಶ್ರೀ ಹೆಚ್. ಜಿ. ಗೋವಿಂದೇಗೌಡ (ಪ್ರಾಥಮಿಕ ಹಾಗೂ ವಯಸ್ಕರ ಶಿಕ್ಷಣ ರಾಜ್ಯ ಸಚಿವರು).—

೧) ಸರ್ಕಾರಿ ಶಾಲೆಗಳು ೨೫೩೧
ಖಾಸಗಿ ಶಾಲೆಗಳು (ಅನುದಾನಿತ) ೫೭೭
ಖಾಸಗಿ ಅನುದಾನ ರಹಿತ ಶಾಲೆಗಳು ೬೮೦

೨) ಸರ್ಕಾರಿ ಶಾಲೆಗಳ ಮತ್ತು ಖಾಸಗಿ ಶಾಲೆಗಳ ಶಿಕ್ಷಕರ ವೇತನ ಶ್ರೇಣಿ ಹಾಗೂ ಭತ್ಯೆ ಒಂದೇ ಇರುತ್ತದೆ. ಖಾಸಗಿ ಶಾಲೆಗಳಿಗೆ ನೀಡುವ ಅನುದಾನ ಪ್ರಮಾಣದಲ್ಲಿ ವ್ಯತ್ಯಾಸವಿದೆ.

೩) ಏಕ ರೀತಿಯ ಅನುದಾನ ಪದ್ಧತಿಯನ್ನು ಜಾರಿಗೆ ತರುವ ಬಗ್ಗೆ ಸರ್ಕಾರ ಪರಿಶೀಲಿಸುತ್ತಿದೆ.

ಶ್ರೀ ಐ. ಬಿ. ಶಂಕರ್.—ಮಾನ್ಯ ಅಧ್ಯಕ್ಷರೆ, ಮಾನ್ಯ ಮಂತ್ರಿಗಳು ಸರ್ಕಾರಿ ಶಾಲೆಗಳ ಮತ್ತು ಖಾಸಗೀ ಶಾಲೆಗಳ ಶಿಕ್ಷಕರ ವೇತನ ಶ್ರೇಣಿ ಹಾಗೂ ಭತ್ಯೆ ಒಂದೇ ಇರುತ್ತದೆಂದು ಹೇಳಿದ್ದಾರೆ. ಖಾಸಗೀ ಶಾಲೆಗಳಿಗೆ ನೀಡುವ ಅನುದಾನ ಪ್ರಮಾಣದಲ್ಲಿ ವ್ಯತ್ಯಾಸವಿದೆ ಎಂದು ಹೇಳಿದ್ದಾರೆ. ಆದರ ಜೊತೆಗೆ ಏಕ ರೀತಿಯ ಅನುದಾನ ಪದ್ಧತಿಯನ್ನು ಜಾರಿಗೆ ತರುವ ಬಗ್ಗೆ ಸರ್ಕಾರ ಪರಿಶೀಲಿಸುತ್ತಿದೆಯೆಂದು ಹೇಳಿದ್ದಾರೆ ಎಷ್ಟು ದಿವಸಗಳಲ್ಲಿ ಇದನ್ನು ಮಾಡುತ್ತೀರಿ ಎಂದು ಕೇಳುತ್ತೇನೆ.

ಶ್ರೀ ಎಚ್. ಜಿ. ಗೋವಿಂದೇಗೌಡ.—ಖಾಸಗಿ ಶಾಲೆಗಳಲ್ಲಿ ಮಕ್ಕಳಿಗೆ ವಿದ್ಯಾಭ್ಯಾಸವನ್ನು ಹೇಳಿಕೊಡುತಕ್ಕ ಪೂರ್ವ ಪ್ರಾಥಮಿಕ ಶಿಕ್ಷಕರಿಗೆ ಜೆಕ್ ಮೂಲಕ ವೇತನ ಸಲ್ಲಿಸುತ್ತಿದ್ದೇವೆ ಆದರಲ್ಲಿ ವ್ಯತ್ಯಾಸ ಆಗುವುದಕ್ಕೆ ಸಾಧ್ಯವಿಲ್ಲ. ಎಲ್ಲಿ ವ್ಯತ್ಯಾಸವಿದೆ ಅಂದರೆ ಹಳೆಯ ಮೈಸೂರು ಭಾಗಕ್ಕೆ ಶೇಕಡ ೫೦ರಷ್ಟು ಕೊಡುತ್ತಿದ್ದೇವೆ. ಗ್ರಾಮಾಂತರ ಪ್ರದೇಶಗಳಲ್ಲಿ ಪೂರ್ವ ಪ್ರಾಥಮಿಕ ಶಾಲೆಗಳಲ್ಲಿ ಕೆಲಸ ಮಾಡತಕ್ಕ ಶಿಕ್ಷಕರಿಗೆ ಶೇಕಡ ೭೦ರಷ್ಟು ಕೊಡುತ್ತಿದ್ದೇವೆ. ಪಟ್ಟಣ ಪ್ರದೇಶಗಳಲ್ಲಿ ಶೇಕಡ ೫೦ರಷ್ಟು ಕೊಡುತ್ತಿದ್ದೇವೆ. ಬಾಂಬೆ ಕರ್ನಾಟಕ ಏರಿಯಾದಲ್ಲಿ ಶೇಕಡ ೨೫ರಷ್ಟು ಕೊಡಲಾಗುತ್ತಿದೆ. ಪೂರ್ವ ಪ್ರಾಥಮಿಕ ಶಾಲೆಗಳನ್ನು ಯಾರು ಎಲ್ಲಿ ಬೇಕಾದರೂ ತೆರೆಯಬಹುದು. ಆದಕ್ಕೆ ಯಾವುದೇ ರೀತಿಯ ಅನುಮತಿಯನ್ನು ಕೊಡುವುದಿಲ್ಲ. ಹಿಂದೆ ಮಾಡಿರತಕ್ಕದ್ದರಲ್ಲಿ ಏನಾದರೂ ವ್ಯತ್ಯಾಸವಾಗಿದ್ದರೆ ಅದನ್ನು ಪರಿಶೀಲನೆ ಮಾಡುತ್ತೇವೆಂದು ಹೇಳುತ್ತೇನೆ.

೧೯೮೫ರಿಂದ ಪ್ರತಿ ಜಿಲ್ಲೆಯಲ್ಲಿ ಎನ್.ಆರ್.ಇ.ಪಿ., ಐ.ಆರ್.ಡಿ.ಪಿ., ಎಲ್.ಇ.ಪಿ. ಯೋಜನೆಗಳಲ್ಲಿ ವೆಚ್ಚ ಮಾಡಿದ ಮೊಬಲಗು

೭೦೬. ಎಂ. ವೀರಯ್ಯಸ್ವಾಮಿ (ಚಿಂಚೋಳಿ).—ಮಾನ್ಯ ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಪ್ರತಿ ಜಿಲ್ಲೆಯಲ್ಲಿ ೧೯೮೫ರಿಂದೀಚೆಗೆ ಎನ್.ಆರ್.ಇ.ಪಿ., ಐ.ಆರ್.ಡಿ.ಪಿ., ಆರ್ ಎಲ್. ಜಿ.ಪಿ. ಮತ್ತು ಇತರೆ ವಿದ್ಯಾಪಂತರ ಉದ್ಯೋಗ ಯೋಜನೆಗಳಲ್ಲಿ ಖರ್ಚಾದ ಒಟ್ಟು ಮೊತ್ತದ ಸಂಖ್ಯೆಗಳನ್ನು (ಯೋಜನಾವಾರು ದಯವಿಟ್ಟು ಕೊಡುವುದು.